ನಮ್ಮ ಇಲಾಖೆಯವರು ಗುಂಡು ಹಾರಿಸಿರುವುದಿಲ್ಲ. ಹಾಗೆ ಅವರು ಗುಂಡು ಹಾರಿಸಿದ್ದರೆ ನಮ್ಮ ಮೇಲಧಿಕಾರಿಗಳಿಗೂ ಹಾಗೂ ಜಿಲ್ಲಾ ದಂಡಾಧಿಕಾರಿಗೂ ತಿಳಿಸುತ್ತಿದ್ದರು. ಈ ಎಲ್ಲಾ ವಿಷಯಗಳ ಬಗ್ಗೆ ಪೋಲೀಸ್ ಇಲಾಖೆಯಿಂದ ಸಮಗ್ರ ತನಿಖೆ ನಡೆಸಲಾಗುತ್ತಿದೆ.

ನೆಲ ಬೆಂಕಿಯಿಂದ ಅರಣ್ಯ ನಾಶವಾದ ಬಗ್ಗೆ ಅಂದಾಜು ಮಾಡಲು ರೂಪಾಯಿ ಮೌಲ್ಯದಲ್ಲಿ ಸಾಧ್ಯವಾಗುವುದಿಲ್ಲ. ಆದರೆ ಪರಿಸರಕ್ಕೆ ಧಕ್ಕೆ ಉಂಟಾಗಿರುತ್ತದೆ. ಮಳೆ ಬರುವವರೆಗೆ ವನ್ಯ ಜೀವಿಗಳಿಗೆ ಕ್ಲಿಷ್ಟ ಪರಿಸ್ಥಿತಿ ಇರುತ್ತದೆ. ಒಂದೆರಡು ಮಳೆ ಬಂದ ಮೇಲೆ ಈ ಪರಿಸ್ಥಿತಿ ಸುಧಾರಿಸುತ್ತದೆ.

ಹಲ್ಲೆಕೋರರು ಹಲ್ಲೆ ನಡೆಸಿ ನಾಶಪಡಿಸಿರುವ ಅಂದಾಜು ಬೆಲೆ ಸುಮಾರು ರೂ. 13 ಲಕ್ಷ ಇರುತ್ತದೆ. ಬಾಳೆಕೋವು ಅರಣ್ಯ ವಲಯ ಕಛೇರಿ ನಾಶ ಹಾಗೂ ವೈರ್‌ಲೆಸ್, ಟೆಲಿಫೋನ್ ಮತ್ತು ಇತರೆ ವಸ್ತುಗಳ ನಾಶ ಸೇರಿ ಸುಮಾರು 3 ಲಕ್ಷ ರೂ.ಗಳು. ಕಟ್ಟಿಗೆ ಮತ್ತು ನಾಟಾಗಳ ನಾಶ ಸುಮಾರು 4 ಲಕ್ಷ ರೂ.ಗಳು ಪರಗೋಲ ಮತ್ತು ಕಾವೇರಿ ವಿಶ್ರಾಂತಿ ಗೃಹಗಳ ನಾಶ 2 ಲಕ್ಷ ರೂ.ಗಳು. ವನ್ಯಪ್ರಾಣಿ ಅನುಸಂಧಾನ ಕಛೇರಿ ಹಾಗೂ ಕಛೇರಿ ವಸ್ತುಗಳ ನಾಶ 2 ಲಕ್ಷ ರೂ. ವನ್ಯ ಪ್ರಾಣಿ ಅನುಸಂಧಾನ ಕಛೇರಿಯ ಜಿಪ್ಸಿ, ವ್ಯಾನ್ ನಾಶ 2 ಲಕ್ಷ ರೂ.ಗಳು.

ನಾಗರಹೊಳೆ ಅಭಯಾರಣ್ಯ ಮತ್ತು ಬ್ರಹ್ಮಗಿರಿ ಅರಣ್ಯ ವಲಯದಲ್ಲಿ ಹರಡುತ್ತಿರುವ ಬೆಂಕಿಯನ್ನು ಪೂರ್ಣವಾಗಿ ಹತೋಟಿಗೆ ತರಲಾಗಿದೆ. ನಾಗರಹೊಳೆ ಅಭಯಾರಣ್ಯದ ನಾಲ್ಕು ವಲಯಗಳ ಅರಣ್ಯ ಸಿಬ್ಬಂದಿಯವರ ಮೇಲೆ ಸುತ್ತಮುತ್ತಲಿನ ಹಳ್ಳಿಯ ಜನರು ಇನ್ನೂ ಗಲಾಟೆ ಮಾಡಿ ಬೆದರಿಕೆ ಹಾಕುತ್ತಿದ್ದಾರೆ. ಇದರಿಂದಾಗಿ ಅರಣ್ಯ ಸಿಬ್ಬಂದಿಯವರು ಕಂಗಾಲಾಗಿ ಹುಣಸೂರು ವಿಭಾಗಾಧಿಕಾರಿಗಳ ಮುಂದೆ ತಮಗೆ ಮತ್ತು ತಮ್ಮ ಸಂಸಾರಕ್ಕೆ ರಕ್ಷಣೆ ಕೊಡದ ಹೊರತು ಅಭಯಾರಣ್ಯದ ಒಳಗೆ ಕಾರ್ಯನಿರ್ವಹಿಸಲು ಕಷ್ಟವಾಗುತ್ತದೆ ಎಂದು ತಿಳಿಸಿರುತ್ತಾರೆ. ಅರಣ್ಯ ಅಧಿಕಾರಿಗಳು ಪೋಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಅರಣ್ಯ ಸಿಬ್ಬಂದಿಯವರಿಗೆ ಕೆಲಸ ಮಾಡಲು ಸಹಾಯವಾಗುವಂತೆ ನಾಲ್ಕು ವಲಯಗಳಲ್ಲೂ ಪೋಲೀಸ್ ಸಿಬ್ಬಂದಿಯನ್ನು ಅರಣ್ಯ ಸಿಬ್ಬಂದಿಯವರ ರಕ್ಷಣೆಗೆ ಕಲುಹಿಸಿಕೊಡಲು ಕೇಳಿಕೊಂಡಿರುತ್ತಾರೆ.

ನಿಯಮ 334ರ ಮೇರೆಗೆ

1. ಪ್ರವೇಶ ತೆರಿಗೆಯ ಬಗ್ಗೆ

ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ) : ಮಾನ್ಯ ಅಧ್ಯಕ್ಷರೇ.

1) 1991-92ನೇ ಆವಧಿಗೆ "ಪ್ರವೇಶ ತೆರಿಗೆ" ಮೂಲಕ ವಸೂಲಾದ ಒಟ್ಟು ಹಣವೆಷ್ಟು ?

2) ಇದೇ ಅವಧಿಗೆ ರಾಜ್ಯದ ಪುರಸಭೇ, ನಗರ ಸಭೆ, ಮಹಾನಗರ ಸಭೆ, ಸ್ಯಾನಿಟರಿ ಬೋರ್ಡಿನ ಮತ್ತು ನೋಟಿಫೈಡ್ ಏರಿಯಾಗಳಿಗೆ ಆಕ್ಟ್ರಾಯ್‌ಗೆ ಪರಿಹಾರವಾಗಿ ಕೊಟ್ಟ ಅಥವಾ ಈ ವರ್ಷದ ಮಾಡ್ರನ್ ಕಾಟ್ರನ್‌ಗೆ ಸೇರಿಸಿಕೊಡಬಹುದಾದ ಒಟ್ಟು ಆಕ್ಟ್ರಾಯ್ ಅನುದಾನವೆಷ್ಟು; (ಪ್ರವೇಶ ತೆರಿಗೆಯಿಂದ) :

3) 1991-92ನೇ ಅವಧಿಗೆ 8 ಐಟಂಗಳಿಂದ ರೂ. 100 ಕೋಟಿ ನಿರೀಕ್ಷಿಸಿದ್ದು, 1991-92ನೇ ಅವಧಿಗೆ 200 ಕೋಟಿ ನಿರೀಕ್ಷಿಸಲಾಗಿದೆ ಎಂದು ಪ್ರಸ್ತಾಪಿಸಲಾಗಿದೆ. ಇದು ಬಹಳ ಕಡಿಮೆ ಎನಿಸಲಿಲ್ಲವೇ ;

4) ಈ ರೀತಿ ಪ್ರವೇಶ ತೆರಿಗೆಯಿಂದ ವಸೂಲಿ ಮಾಡುವ ಹಣವನ್ನು ಪೂರ್ತಿಯಾಗಿ ಪುರಸಭೆ, ನಗರಸಭೆ, ಮಹಾನಗರಸಭೆ ಸ್ಯಾನಿಟರಿ ಬೋರ್ಡ್ ಮತ್ತು ನೋಟಿಫೈಡ್ ಏರಿಯಾಗಳಿಗೆ ಬಿಡುಗಡೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ :-

ಕೇಂದ್ರ ಸರ್ಕಾರವು ಆಕ್ಟ್ರಾಯ್ ಕಾಯ್ದೆಯು ಬಹಳ ಹಳೆಯ ತೆರಿಗೆ ಸಂಗ್ರಹಣ ಪದ್ಧತಿಯೆಂದು ಪರಿಗಣಿಸಿ ಸ್ಥಳೀಯ ನಿಕಾಯಗಳ ಕಂದಾಯಕ್ಕೆ ದಕ್ಕೆ ಬರದಂತೆ ಸೂಕ್ತ ಬದಲಾವಣೆಗಾಗಿ ಸರ್ಕಾರವು ಒಂದು ಆಯೋಗವನ್ನು ರಚಿಸಿತು. ಸದರಿ ಆಯೋಗದ ಶಿಫಾರಸ್ಸಿನ ಮೇರೆಗೆ ಆಕ್ಟ್ರಾಯನ್ನು ರದ್ದು ಪಡಿಸಿ ಪ್ರವೇಶ ತೆರಿಗೆಯನ್ನು ದಿನಾಂಕ 1-4-1979 ರಿಂದ ಜಾರಿಗೊಳಿಸಲಾಯಿತು. ರಾಜ್ಯ ತೆರಿಗೆ ಹಾಗೂ ಸ್ಥಳೀಯ ನಿಕಾಯಗಳೆರಡಕ್ಕೂ ಅನ್ವಯಿಸುವಂತೆ ಪ್ರವೇಶ ತೆರಿಗೆಯನ್ನು ಜಾರಿಗೊಳಿಸಿ ಪ್ರಾರಂಭದಲ್ಲಿ ಟೆಕ್ಸ್‌ಟೈಲ್ಸ್, ತಂಬಾಕು ಮತ್ತು ಸಕ್ಕರೆ, 3 ಪದಾರ್ಥಗಳು ಮತ್ರಾ ಪ್ರವೇಶ ತೆರಿಗೆಗೆ ಒಳಪಡುತ್ತಿದ್ದು ನಂತರ ತೆರಿಗೆ ವರಮಾನ ದೃಷ್ಟಿಯಿಂದ ಕೈಗಾರಿಕಾ ಯಂತ್ರಗಳು ಮತ್ತು ಅವುಗಳ ಬಿಡಿ ಭಾಗಗಳು, ಎಲ್ಲಾ ಪೆಟ್ರೋಲಿಯಂ ಉತ್ಪನ್ನಗಳು, ಸರಿಕಿನ ಪ್ಯಾಕಿಂಗ್ ಸಾಧನಗಳು, ಕೈಗಾರಿಕಾ ಗ್ಯಾಸ್ (ಎಲ್.ಪಿ. ಹೊರತು) ಮತ್ತು ಕಾರ್ಖಾನೆಯಲ್ಲಿ ಸಿದ್ಧವಸ್ತು ತಯಾರಿಕೆ, ಅಥವಾ ಸಂಸ್ಕರಣೆ ಹಾಗೂ ರಿಪೇರಿಗೆ ಬೇಕಾಗುಂತಹ ಕಚ್ಚಾ ವಸ್ತುಗಳು, ಅಂಗ ಭಾಗಗಳು-ಪ್ರಸ್ತುತ 8 ಪದಾರ್ಥಗಳ ಮೇಲೆ ಶೇಕಡ 2 ರಂತೆ ಪ್ರವೇಶ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಪ್ರವೇಶ ತೆರಿಗೆ ಕಾಯ್ದೆ 1979 ಕಲಂ 29ರ ಅನ್ವಯ ಪ್ರವೇಶ ತೆರಿಗೆ ರೂಪದಲ್ಲಿ 1991-92ರಲ್ಲಿ ಆಯವ್ಯಯ ಅಂದಾಜುಗಳ ಪ್ರಕಾರ ರೂ. 72 ಕೋಟಿಗಳಷ್ಟು ವಸೂಲಿ ಮಾಡಬೇಕಾಗಿದ್ದು 1991-92ರ ಫೆಬ್ರವರಿ ಅಂತ್ಯದವರೆಗೆ 69.18 ಕೋಟಿ ರೂ. ವಸೂಲಿ ಮಾಡಲಾಗಿದೆ.

1992-93ನೇ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ 103 ಪದಾರ್ಥಗಳ ಮೇಲೆ ಶೇಕಡ 5 ರವರೆಗೆ ಪ್ರವೇಶ ತೆರಿಗೆಯನ್ನು ವಿಧಿಸಬಹುದು. ಆದರೆ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ಬಡ ವರ್ಗದವರ ನಿತ್ಯ ಬಳಕೆಯಲ್ಲಿರುವ ಕೆಲವು ವಸ್ತುಗಳ ಮೇಲೆ ಈ ತೆರಿಗೆ ವಿಧಿಸಲು ಉದ್ದೇಶಿಸಿರುವುದಿಲ್ಲ. ಈ ಸಂದರ್ಭದಲ್ಲಿ ಪ್ರವೇಶ ತೆರಿಗೆಯಿಂದ ಬರುವ ಆದಾಯದ ಮೊತ್ತ 216 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

2. ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಗೆ ಶಾಲಾ ಮಕ್ಕಳಿಗಾಗಿ ಬಸ್ಸನ್ನು ಓಡಿಸುವ ಬಗ್ಗೆ.

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ ನನ್ನ ಮತಕ್ಷೇತ್ರಕ್ಕೆ ಸೇರಿದ್ದು, ಈ ಮೇಲ್ಕಂಡ ಹೋಬಳಿಯಲ್ಲಿ ಜಂದಾಲ್ ಪಾಠಶಾಲೆ ಹಾಗೂ ಟಿ.ಸಿ.ಐ. ಇಂಗ್ಲೀಷ್ ಶಾಲೆ ಎಂಬ ಹೆಸರಿನ ಪಾಠಶಾಲೆಗಳಿದ್ದು ಈ ಶಾಲೆಗಳಿಗೆ